**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/44/ಮ.ಲೇ.ಆ./2017-18/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 24/11/-2018.

ಇವರಿಗೆ:
ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು, ಮೈಸೂರು, ಶಿವಮೊಗ್ಗ,
ಮಂಗಳೂರು, ಧಾರವಾಡ ಹಾಗೂ ಕಲಬುರಗಿ.

ಮಾನ್ಯರೆ,

ವಿಷಯ: ಯುಜಿಸಿಯು ನಿಗದಿಪಡಿಸಿರುವ ಹೆಚ್ಚುವರಿ ವಿದ್ಯಾರ್ಹತೆಯಾದ NET/SLET/PhD ಪದವಿಯನ್ನು ಪಡೆಯದೆ 2006ರ ಯುಜಿಸಿ ವೇತನ ಶ್ರೇಣಿ ಪಡೆಯುತ್ತಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ:ಶಿಇ/205/ಐಎಫ್ (ಬಿ&ಎ) 2018, ದಿನಾಂಕ:20-08-2018.
2. Report of the comptroller and Auditor General of India on General and Social Section for the year ended March 2017 ರ ವರದಿಯಲ್ಲಿನ ಕಂಡಿಕೆ ಸಂಖ್ಯೆ: 4.1.5
3. ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 12-09-2017, 10-09-2018 ಮತ್ತು ನೆನಪೋಲೆಯ ದಿನಾಂಕ:27-10-2018

*****

ಸೂಚಿತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿನ ಬೋಧಕರುಗಳಿಗೆ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳನ್ನು ದಿನಾಂಕ:24-12-2009ರ ಸರ್ಕಾರಿ ಆದೇಶ ಸಂಖ್ಯೆ: ಇಡಿ/37/ಯುಎನ್‌ಇ/2009ರಲ್ಲಿ ವಿಸ್ತರಿಸಿದ್ದು, ಸದರಿ ಆದೇಶದ ಕಂಡಿಕೆ 7 (viii)-7(ix) ಹಾಗೂ 21.5ಗಳಲ್ಲಿ ವಿಸ್ತರಿಸುವ ಬಗ್ಗೆ ಸೂಚನೆಗಳನ್ನು ನೀಡಲಾಗಿತ್ತು ಸದರಿ ಕಂಡಿಕೆಗಳಲ್ಲಿ ನೀಡಲಾಗಿರುವ ಸೂಚನೆಗಳನ್ನು ಪಾಲಿಸದೇ ಮತ್ತು ಅಗತ್ಯ ವಿದ್ಯಾರ್ಹತೆಯನ್ನು ಹೊಂದದಿದ್ದಾಗ್ಯೂ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗಳಲ್ಲಿ ಸರ್ಕಾರಿ/ಅನುದಾನಿತ ಪದವಿ/ಶಿಕ್ಷಣ/ ಕಾನೂನು ಕಾಲೇಜುಗಳ ಬೋಧಕರುಗಳಿಗೆ ವೇತನ ನಿಗದಿಪಡಿಸಿರುವ ಕುರಿತು ಉಲ್ಲೇಖಿತ ಪತ್ರದಲ್ಲಿ ಮಹಾಲೇಖಪಾಲರು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ. ಈ ಕಛೇರಿಯ ಸಮ ಸಂಖ್ಯೆಯ ದಿನಾಂಕ: 10-09-2018ರ ಪತ್ರದಲ್ಲಿ ಮಹಾಲೇಖಪಾಲರ ಟೆಸ್ಟ್-ಚೆಕ್‌ನಲ್ಲಿ ಆಕ್ಷೇಪಿತ ಉಪನ್ಯಾಸಕರುಗಳ ಪಟ್ಟಿಯನ್ನು ಲಗತ್ತಿಸಿದ್ದು, ಈ ಪಟ್ಟಿಯಲ್ಲಿನ ಉಪನ್ಯಾಸಕರುಗಳ ವೇತನ ನಿಗದಿಪಡಿಸಿರುವ ಬಗ್ಗೆ ಸಂಬಂಧಪಟ್ಟ ಕಾಲೇಜುಗಳಿಗೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ಲಗತ್ತಿಸಲಾಗಿರುವ ನಮೂನೆಯಲ್ಲಿ

ವಿವರಗಳನ್ನು ಭರ್ತಿ ಮಾಡಿ ಸ್ಪಷ್ಟ ಅಭಿಪ್ರಾಯ ಮತ್ತು ದೃಢೀಕೃತ ದಾಖಲೆಗಳೊಂದಿಗೆ ವರದಿಯನ್ನು ಕ್ರೋಢೀಕರಿಸಿ ಈ ಕಛೇರಿಗೆ ದಿನಾಂಕ:20-09-2018 ರೊಳಗೆ ಸಲ್ಲಿಸುವಂತೆ ಸೂಚಿಸಲಾಗಿದ್ದು. ಸದರಿ ಮಾಹಿತಿಯ ಹಾರ್ಡ್ ಕಾಪಿ ಹಾಗೂ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸ (dceservice1@gmail.com) ಮೂಲಕ ಸಲ್ಲಿಸಲು ಈಗಾಗಲೇ ಉಲ್ಲೇಖ (3)ರ ಪತ್ರದಲ್ಲಿ ಸೂಚಿಸಲಾಗಿತ್ತು. ಆದರೆ ಇದುವರೆವಿಗೂ ಕ್ರೋಢೀಕೃತ ಮಾಹಿತಿ ಸಲ್ಲಿಸಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ಸದರಿ ವಿಷಯವು Public Accounts Committee ಮುಂದೆ ಪ್ರಸ್ತುತಪಡಿಸಲಾದಲ್ಲಿ ವಿಷಯವು ತೀವ್ರ ಸ್ವರೂಪವನ್ನು ಪಡೆದುಕೊಳ್ಳಲಿರುವುದರಿಂದ ತುರ್ತಾಗಿ ತಾವೇ ಖುದ್ದಾಗಿ ಈ ಕೆಳಕಂಡ ದಿನಾಂಕಗಳಂದು ತಮ್ಮ ಕಛೇರಿಯ ವ್ಯಾಪ್ತಿಯ ಕಾಲೇಜುಗಳಲ್ಲಿನ ಉಪನ್ಯಾಸಕರುಗಳ ದೃಢೀಕೃತ ದಾಖಲೆಗಳು ಮತ್ತು ಮೂಲ ಸೇವಾಪುಸ್ತಕವನ್ನು ಒಳಗೊಂಡಂತೆ ಮೂಲ ದಾಖಲೆಗಳೊಂದಿಗೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಮುಂದಿನ ಆಗು-ಹೋಗುಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು

| ಕ್ರ ಸಂ | ಪ್ರಾದೇಶಿಕ ಕಛೇರಿ | ಹಾಜರಾಗುವ ದಿನಾಂಕ |
|---|---|---|
| 1 | ಬೆಂಗಳೂರು | 01-12-2018 ರಿಂದ 05-12-2018 |
| 2 | ಮೈಸೂರು | 06-12-2018 ರಿಂದ 07-12-2018 |
| 3 | ಶಿವಮೊಗ್ಗ | 10-12-2018 ರಿಂದ 12-12-2018 |
| 4 | ಮಂಗಳೂರು | 13-12-2018 ರಿಂದ 15-12-2018 |
| 5 | ಧಾರವಾಡ | 17-12-2018 ರಿಂದ 22-12-2018 |
| 6 | ಕಲಬುರ್ಗಿ | 26-12-2018 ರಿಂದ 28-12-2018 |

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಅಗತ್ಯ ಕ್ರಮಕ್ಕಾಗಿ.

**ಪ್ರತಿಗಳು:**

1. ಕೇಂದ್ರ ಕಛೇರಿಯ ಲೆಕ್ಕಾಧಿಕಾರಿಗಳು, ಲೆಕ್ಕಾಧೀಕ್ಷಕರು ಮತ್ತು ಲೆಕ್ಕವಿಭಾಗದ ಸಿಬ್ಬಂದಿಗಳು ಸದರಿ ದಿನಾಂಕಗಳಂದು ಹಾಜರಿದ್ದು ದಾಖಲೆಗಳನ್ನು ಮತ್ತು ವೇತನ ನಿಗದೀಕರಣ ಪರಿಶೀಲಿಸಲು ಸೂಚಿಸಲಾಗಿದೆ.
2. ಮ್ಯಾನೇಜರ್/ಅಧೀಕ್ಷಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3. ಕಛೇರಿ ಪ್ರತಿ.

44-AG objection